# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **403** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಕೆ. ಪ್ರತಾಪಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **12-12-2024** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಂಚನೆಯ ಸಲುವಾಗಿ ದಿನಕ್ಕೊಂದು ಹೊಸ ಅಸ್ತ್ರ ಪ್ರಯೋಗಿಸುತ್ತಿರುವ ಸೈಬರ್ ವಂಚಕರು "ಡಿಜಿಟಲ್ ಅರೆಸ್ಟ್" ಎಂಬ ಹೊಸ ಮಾದರಿಯ ವಂಚನೆಯ ಪ್ರಕಾರದ ಮೂಲಕ ಹಲವರನ್ನು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಹೌದು.<br><br>ಪ್ರಸ್ತುತ ವರ್ಷದಲ್ಲಿ "ಡಿಜಿಟಲ್ ಅರೆಸ್ಟ್" ಸಂಬಂಧಿತ ಒಟ್ಟು 641 ಪ್ರಕರಣಗಳು ದಾಖಲಾಗಿರುತ್ತವೆ. |
| ಆ) | ಬಂದಿದ್ದಲ್ಲಿ, ಪ್ರಸ್ತುತ ವರ್ಷದಲ್ಲಿ ಈ ಸಂಬಂಧಿತ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ; | |
| ಇ) | ಸದರಿ ದಾಖಲಾದ ಪ್ರಕರಣಗಳಲ್ಲಿ ವಂಚಕರಿಂದ ಸಾರ್ವಜನಿಕರು ಕಳೆದುಕೊಂಡಿರುವ ಹಣದ ಮೊತ್ತವೆಷ್ಟು; (ವಿವರ ನೀಡುವುದು) | "ಡಿಜಿಟಲ್ ಅರೆಸ್ಟ್" ಸಂಬಂಧಿತ ಒಟ್ಟು 641 ಪ್ರಕರಣಗಳಲ್ಲಿ ವಂಚಕರಿಂದ ಸಾರ್ವಜನಿಕರು ಕಳೆದುಕೊಂಡಿರುವ ಹಣದ ಮೊತ್ತ ಮತ್ತು ವಂಚಕರನ್ನು ಪತ್ತೆ ಮಾಡಿ ಅವರಿಂದ ವಶಪಡಿಸಿಕೊಂಡ ಮೊತ್ತದ ವಿವರಗಳು ಈ ಕೆಳಕಂಡಂತಿವೆ.<br><br>ವಂಚನೆಯ ಮೊತ್ತ: 109,01,44,133<br>ವಶಪಡಿಸಿಕೊಂಡ ಮೊತ್ತ: 9,45,71,214<br><br>"ಡಿಜಿಟಲ್ ಅರೆಸ್ಟ್" ಸಂಬಂಧಿತ 641 ಪ್ರಕರಣಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಈ) | ಸದರಿ ಪ್ರಕರಣಗಳಲ್ಲಿ ವಂಚಕರ ಮೂಲವನ್ನು ಪತ್ತೆ ಮಾಡಿ, ಅವರಿಂದ ವಂಚನೆಯ ಹಣವನ್ನು ವಶಪಡಿಸಿಕೊಳ್ಳಲಾಗಿದೆಯೇ; | |
| ಉ) | "ಡಿಜಿಟಲ್ ಅರೆಸ್ಟ್" ವಂಚನೆಯ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಹಲವಾರು ಅಮಾಯಕರು ಈ ವಂಚನೆಯ ಜಾಲಕ್ಕೆ ಸಿಲುಕಿ, ಸಂಕಷ್ಟಕ್ಕೀಡಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | "ಡಿಜಿಟಲ್ ಅರೆಸ್ಟ್" ವಂಚನೆಯ ಪ್ರಕರಣಗಳನ್ನು ತಡೆಯಲು ಈ ಕೆಳಂಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>❖ "ಡಿಜಿಟಲ್ ಅರೆಸ್ಟ್" ವಂಚನೆಯ ಪ್ರಕರಣಗಳ ಬಗ್ಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ |

| | | |
|---|---|---|
| | | ಹಾಗೂ ಟ್ವೀಟ್ಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br><br>❖ ಶಾಲಾ ಕಾಲೇಜುಗಳಿಗೆ, ಇತರೆ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರಿಗೆ "ಡಿಜಿಟಲ್ ಅರೆಸ್ಟ್" ವಂಚನೆಯ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>❖ ಸಾರ್ವಜನಿಕರನ್ನು ಇಂತಹ ಅಪರಾಧಿಕ ಕೃತ್ಯಗಳ ಮೂಲಕ ವಂಚಿಸಲು ನಕಲಿ ಸಿಮ್‌ಕಾರ್ಡ್ ಹಾಗೂ ನಕಲಿ ಬ್ಯಾಂಕ್ ಖಾತೆಗಳನ್ನು ಮಾರಾಟಕ್ಕೆ ಬಳಸುವ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟೆಲಿಗ್ರಾಂ, ಇತರೆ ಅಂತರ್ಜಾಲ ವೇದಿಕೆಗಳಲ್ಲಿ ಸಕ್ರಿಯವಾಗಿರುವ ಖಾತೆಗಳು ಹಾಗೂ ಗುಂಪುಗಳನ್ನು ಪತ್ತೆ ಹಚ್ಚಿ, 268 ಫೇಸ್‌ಬುಕ್ ಗುಂಪುಗಳು, 465 ಟೆಲಿಗ್ರಾಂ ಗುಂಪುಗಳು, 15 ಇನ್‌ಸ್ಟಾಗ್ರಾಂ ಖಾತೆಗಳು ಹಾಗೂ 61 ವಾಟ್ಸ್‌ಆಪ್ ಗುಂಪುಗಳನ್ನು ನಿಷ್ಕ್ರಿಯಗೊಳಿಸಲಾಗಿರುತ್ತದೆ.<br><br>❖ "ಡಿಜಿಟಲ್ ಅರೆಸ್ಟ್" ಮೂಲಕ ಸಾರ್ವಜನಿಕರನ್ನು ವಂಚಿಸುತ್ತಿರುವ ಸೈಬರ್ ವಂಚಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ, ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್ 61 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ.

## ಡಿಜಿಟಲ್ ವಂಚನೆಯ ಪ್ರಕರಣಗಳ ವಿವರಗಳು

| ಕ್ರ.ಸಂ | ಘಟಕ | ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಆರೋಪಿತರ & ಬಂಧಿತರ ಸಂಖ್ಯೆ | ವಂಚನೆ ಮೊತ್ತ | ವಶಪಡಿಸಿಕೊಂಡ ವಂಚನೆಯ ಮೊತ್ತ |
|---|---|---|---|---|---|
| 1 | ಬಾಗಲಕೋಟೆ ಜಿಲ್ಲೆ | 5 | 2 | 8227094 | 1006367 |
| 2 | ಬಳ್ಳಾರಿ ಜಿಲ್ಲೆ | 4 | 0 | 1805354 | 546071 |
| 3 | ಬೆಳಗಾವಿ ನಗರ | 5 | 0 | 7913826 | 666654 |
| 4 | ಬೆಳಗಾವಿ ಜಿಲ್ಲೆ | 3 | 0 | 5950000 | 1633627 |
| 5 | ಬೆಂಗಳೂರು ನಗರ | 480 | 0 | 424100000 | 36300000 |
| 6 | ಬೆಂಗಳೂರು ಜಿಲ್ಲೆ | 17 | 0 | 31374380 | 5439708 |
| 7 | ಬೀದರ್ ಜಿಲ್ಲೆ | 1 | 0 | 14000000 | 0 |
| 8 | ಚಾಮರಾಜನಗರ ಜಿಲ್ಲೆ | 2 | 0 | 2810070 | 0 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 2 | 0 | 215000 | 61000 |
| 10 | ಚಿಕ್ಕಮಗಳೂರು ಜಿಲ್ಲೆ | 2 | 0 | 1797000 | 0 |
| 11 | ಚಿತ್ರದುರ್ಗ ಜಿಲ್ಲೆ | 1 | 2 | 12700000 | 2044542 |
| 12 | ದಕ್ಷಿಣ ಕನ್ನಡ ಜಿಲ್ಲೆ | 0 | 0 | 0 | 0 |
| 13 | ದಾವಣಗೆರೆ ಜಿಲ್ಲೆ | 6 | 0 | 9058000 | 251242 |
| 14 | ಧಾರವಾಡ ಜಿಲ್ಲೆ | 4 | 1 | 2020130 | 1495499 |
| 15 | ಗದಗ ಜಿಲ್ಲೆ | 2 | 0 | 4504000 | 600000 |
| 16 | ಹಾಸನ ಜಿಲ್ಲೆ | 0 | 0 | 0 | 0 |
| 17 | ಹಾವೇರಿ ಜಿಲ್ಲೆ | 3 | 0 | 37175000 | 910000 |
| 18 | ಹುಬ್ಬಳ್ಳಿ-ಧಾರವಾಡ ನಗರ | 9 | 0 | 33968693 | 1112025 |
| 19 | ಕೆ.ಜಿ.ಎಫ್ | 0 | 0 | 0 | 0 |
| 20 | ಕಲಬುರಗಿ ನಗರ | 1 | 0 | 7665000 | 0 |
| 21 | ಕಲಬುರಗಿ ಜಿಲ್ಲೆ | 0 | 0 | 0 | 0 |
| 22 | ಕರ್ನಾಟಕ ರೈಲ್ವೆಸ್ | 0 | 0 | 0 | 0 |
| 23 | ಕೊಡಗು ಮಡಿಕೇರಿ | 2 | 0 | 10830023 | 1487000 |
| 24 | ಕೋಲಾರ ಜಿಲ್ಲೆ | 0 | 0 | 0 | 0 |
| 25 | ಕೊಪ್ಪಳ ಜಿಲ್ಲೆ | 0 | 0 | 0 | 0 |
| 26 | ಮಂಡ್ಯ ಜಿಲ್ಲೆ | 2 | 0 | 5575000 | 198500 |
| 27 | ಮಂಗಳೂರು ನಗರ | 21 | 5 | 83076994 | 6332533 |
| 28 | ಮೈಸೂರು ನಗರ | 24 | 3 | 84593265 | 2623153 |
| 29 | ಮೈಸೂರು ಜಿಲ್ಲೆ | 0 | 0 | 0 | 0 |
| 30 | ರಾಯಚೂರು ಜಿಲ್ಲೆ | 0 | 0 | 0 | 0 |
| 31 | ರಾಮನಗರ ಜಿಲ್ಲೆ | 7 | 0 | 15585398 | 88542 |
| 32 | ಶಿವಮೊಗ್ಗ ಜಿಲ್ಲೆ | 4 | 0 | 5800000 | 2904751 |
| 33 | ತುಮಕೂರು ಜಿಲ್ಲೆ | 13 | 2 | 17305201 | 0 |
| 34 | ಉಡುಪಿ ಜಿಲ್ಲೆ | 6 | 3 | 26924405 | 1395000 |
| 35 | ಉತ್ತರ ಕನ್ನಡ ಕಾರವಾರ | 4 | 0 | 4188100 | 1240000 |
| 36 | ವಿಜಯನಗರ ಜಿಲ್ಲೆ | 0 | 0 | 0 | 0 |
| 37 | ವಿಜಯಪುರ ಜಿಲ್ಲೆ | 6 | 4 | 12059537 | 0 |
| 38 | ಯಾದಗಿರಿ ಜಿಲ್ಲೆ | 0 | 0 | 0 | 0 |
| 39 | ಸಿಐಡಿ ಘಟಕ | 5 | 5 | 218922663 | 26235000 |
| **ಒಟ್ಟು** | | **641** | **27** | **1090144133** | **94571214** |